ಕರ್ನಾಟಕ ಸರಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ.

ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ E-mail id:rchogadag@gmail.com

ಕ್ರ.ಸಂ:ಜಿಆಕುಕಾಸೋಗ/ಎನ್.ಹೆಚ್.ಎಂ./MHU–ನೇ.ಪ್ರ/275/2025–26 ದಿನಾಂಕ:18.09.2025

### ನೇಮಕಾತಿ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ರಾಜ್ಯ ಮಟ್ಟದ ಮಾನವ ಸಂಪನ್ಮೂಲ RoP-2025-26 ಅನುಮೋದನೆಯಂತೆ ಸಂಚಾರಿ ಆರೋಗ್ಯ ಘಟಕಗಳಿಗೆ ಅನುಮೋದನೆಗೊಂಡ 02 ಎಮ್,ಬಿ,ಬಿಎಸ್ ವೈದ್ಯಾಧಿಕಾರಿಗಳು, 02 ಶುಶ್ರೂಷ ಅಧಿಕಾರಿಗಳ ಮತ್ತು 02 ಪ್ರಯೋಗಶಾಲಾ ತಂತ್ರಜ್ಞರುಗಳ ಹುದ್ದೆಗಳು ಖಾಲಿಯಿದ್ದು ಸದರಿ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು. ಅಭ್ಯರ್ಥಿಗಳು Online ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿಗಳ ಪ್ರಾರಂಭ ದಿನಾಂಕ:19.09.2025 ರಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:25.09.2025ರ ವರೆಗೆ ಅರ್ಜಿ ಸಲ್ಲಿಸಬೇಕಾದ Website https://gadag.nic.in ನಲ್ಲಿ ಅರ್ಜಿ ಸಲ್ಲಿಸುವುದು ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಎನ್.ಹೆಚ್.ಎಮ್ ಮಾರ್ಗಸೂಚಿ/ಆರ್.ಓ.ಪಿ ಪ್ರಕಾರ ಹುದ್ದೆಗಳನ್ನು ಹೆಚ್ಚು ಅಥವಾ ಕಡಿಮೆ ಮಾಡುವ ಅಧಿಕಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘಕ್ಕೆ ಇರುತ್ತದೆ. ಆಯ್ಕೆ ಸಮಿತಿ ಹಾಗೂ ಸಂಘದ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತದೆ. (ವಿ.ಸೂ: ಪರಿಶಿಷ್ಟ ಜಾತಿ ಇದ್ದಲ್ಲಿ ಉಪಜಾತಿಯನ್ನು ಖಡ್ಡಾಯವಾಗಿ Website https://gadag.nic.in ನಲ್ಲಿ ನಮೂದಿಸಲು ಸೂಚಿಸಲಾಗಿದೆ.)

| ಕ್ರ.ಸಂ | ಹುದ್ದೆ | ವಿದ್ಯಾರ್ಹತೆ | ಅನುಭವದ ವಿವರ ಮತ್ತು ವಯೋಮಿತಿ | ರೋಸ್ಟರ್ ಸಂಖ್ಯೆ & ವಿವರ | ವೇತನ (ಪ್ರತಿ ಮಾಹೆಗೆ) |
|---|---|---|---|---|---|
| 1 | ಎಂ.ಬಿ.ಬಿ.ಎಸ್ ವೈದ್ಯಾಧಿಕಾರಿಗಳು (ಹುದ್ದೆಗಳ ಸಂಖ್ಯೆ:02) | • ಎಂ.ಬಿ.ಬಿಎಸ್ ಉತ್ತೀರ್ಣರಾಗಿರಬೇಕು ಹಾಗೂ ಕಡ್ಡಾಯವಾಗಿ Internship ಪೂರೈಸಿರಬೇಕು.<br>• ಕೆ.ಎಂ.ಸಿ ಯ ನೋಂದಣಿ ಹೊಂದಿರತಕ್ಕದು.<br>• ಸಂಬಂಧಪಟ್ಟ ವಿಶ್ವ ವಿದ್ಯಾನಿಲಯದಿಂದ Convocation/Degree Certificate ಹೊಂದಿರಬೇಕು. | **ಅನುಭವ:** ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಅನುಭವನವನ್ನು ಹೊಂದಿರಬೇಕು.<br>**ವಯೋಮಿತಿ:** ಗರಿಷ್ಠ 65 ವರ್ಷ | 1. ಪರಿಶಿಷ್ಟ ಜಾತಿ ಪ್ರವರ್ಗ– ಎ (ಸಾಮಾನ್ಯ ಅಭ್ಯರ್ಥಿ)<br>2. ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) | ರೂ.75,000/– |
| 2 | ಶುಶೂಷಕರು (ಹುದ್ದೆಗಳ ಸಂಖ್ಯೆ:02) | • ಜಿ.ಎನ್.ಎಂ ನರ್ಸಿಂಗ್/ಬಿ.ಎಸ್.ಸಿ ನರ್ಸಿಂಗ್<br>• ಕರ್ನಾಟಕ ನರ್ಸಿಂಗ್ ಕೌನ್ಸಿಲಿಂಗ್‌ನಲ್ಲಿ ನೋಂದಣಿಯಾಗಿರಬೇಕು. | **ಅನುಭವ:** ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಅನುಭವನವನ್ನು ಹೊಂದಿರಬೇಕು.<br>**ವಯೋಮಿತಿ:** ಗರಿಷ್ಠ 45 ವರ್ಷ | 1. ಪರಿಶಿಷ್ಟ ಜಾತಿ ಪ್ರವರ್ಗ– ಎ (ಸಾಮಾನ್ಯ ಅಭ್ಯರ್ಥಿ)<br>2. ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) | ರೂ.22,000/– |
| 3 | ಪ್ರಯೋಗ ಶಾಲಾ ತಂತ್ರಜ್ಞರು (ಹುದ್ದೆಗಳ ಸಂಖ್ಯೆ:02) | • ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು ಮತ್ತು ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯು ನಡೆಸುವ ಪ್ರಯೋಗ ಶಾಲಾ ತಂತ್ರಜ್ಞತೆಯಲ್ಲಿ ಮೂರು ವರ್ಷದ ಡಿಪ್ಲೋಮಾ ಹೊಂದಿರಬೇಕು.<br>**ಅಥವಾ**<br>• ದ್ವಿತೀಯ ಪಿ.ಯು.ಸಿ ಯಲ್ಲಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣ ಮತ್ತು ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯು ನಡೆಸುವ ಪ್ರಯೋಗ ಶಾಲಾ ತಂತ್ರಜ್ಞತೆಯಲ್ಲಿ ಎರಡು ವರ್ಷದ ಡಿಪ್ಲೋಮಾ ಹೊಂದಿರಬೇಕು<br>• ಪ್ರಯೋಗ ಶಾಲಾ ತಂತ್ರಜ್ಞರು ಕಡ್ಡಾಯವಾಗಿ ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯ ನೋಂದಣಿ ಹೊಂದಿರುಬೇಕು. | **ಅನುಭವ:** ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಅನುಭವನವನ್ನು ಹೊಂದಿರಬೇಕು.<br>**ವಯೋಮಿತಿ:** ಗರಿಷ್ಠ 45 ವರ್ಷ | 1. ಪರಿಶಿಷ್ಟ ಜಾತಿ ಪ್ರವರ್ಗ– ಎ (ಸಾಮಾನ್ಯ ಅಭ್ಯರ್ಥಿ)<br>2. ಸಾಮಾನ್ಯ ಅಭ್ಯರ್ಥಿ (ಮಹಿಳಾ ಅಭ್ಯರ್ಥಿ) | ರೂ.20,000/– |

ಉಪಾಧ್ಯಕ್ಷರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಹಾಗೂ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು ಗದಗ